ಮಕ್ಕಳ ಸಾಹಿತ್ಯ ರಚನೆ ಹಾಗೂ ಸಂಘಟನೆಯಲ್ಲಿ ಪ್ರಜ್ಞಾಪೂರ್ವಕವಾಗಿ ತೊಡಗಿಸಿಕೊಂಡಿರುವ ಕೆ. ಶಿವಲಿಂಗಪ್ಪ ಹಂದಿಹಾಳು ಬಳ್ಳಾರಿ ಜಿಲ್ಲೆಯ ಹಂದಿಹಾಳದವರು. ವೃತ್ತಿಯಿಂದ ಶಿಕ್ಷಕರು. ಡಿಜಿಟಲ್ ತಂತ್ರಜ್ಞಾನದ ಸಾಧ್ಯತೆಗಳನ್ನು ಒಳಗೊಂಡಿರುವ 'ನೋಟ್‌ಬುಕ್' ಮಕ್ಕಳ ಕಥೆಗಳ ಸಂಕಲನ ಶಿವಲಿಂಗಪ್ಪನವರ ಮುಖ್ಯ ಕೃತಿ. 'ಯಂಗ್ ಸೈಂಟಿಸ್ಟ್' ಮಕ್ಕಳ ಕಾದಂಬರಿ. 'ಶಾವೋಲಿನ್' ಹಾಗೂ 'ಅವಳಿ' ಅನುವಾದಿತ ಕೃತಿಗಳು.

ಬಕ್ರೀದ್ ಹಬ್ಬವು ಕೂಡ ಇವತ್ತೇ ಬಂದಿದೆ. ನಾವೇನೋ ತಿಂಗಳಿಗೆ ಹತ್ತು-ಹನ್ನೆರಡು ಹಬ್ಬಗಳನ್ನು, ಅಮಾವಾಸ್ಯೆ, ಹುಣ್ಣಿಮೆಗಳನ್ನು ಆಚರಿಸುತ್ತೀವಿ. ಆದರೆ, ಮುಸಲ್ಮಾನರಿಗೆ ಹಬ್ಬಗಳೇ ಕಡಿಮೆ. ಬಕ್ರೀದ್, ರಂಜಾನ್ ಬಹಳ ಮುಖ್ಯವಾದವು. ಆದರೆ, ನಮ್ಮ ಮುನ್ನಿಗೆ ಮಾತ್ರ ಬಕ್ರೀದ್ ಹಬ್ಬ ಅಂದ್ರೆ ಬಹಳ ಇಷ್ಟ.

ಮುನ್ನಿ ಬಡೇಸಾಬರ ಮೂವರು ಮಕ್ಕಳಲ್ಲಿ ಕೊನೆಯ ಮತ್ತು ಅವರಿಗೆ ಅತ್ಯಂತ ಪ್ರೀತಿಯ ಮಗಳು. ಕುಲುಮೆ ಕೆಲಸ ಮಾಡುತ್ತಲೇ ಸುತ್ತಮುತ್ತ ಊರುಗಳಿಗೆ ಹೆಸರುವಾಸಿಯಾಗಿರುವ ಬಡೇಸಾಬ್, ಶಿಲಿವೇರಿ ಶಿವಪ್ಪ ತಾತನ ತತ್ವಕ್ಕೆ ಒಪ್ಪಿ ಗುಡಿಕಲ್ಲು ಪೀಠದ ಶಿಶುಮಗ ಆಗಿದ್ದರು. ಅವರ ಹಿರಿ ಮಗ ಅವರದೇ ಕೆಲಸದಲ್ಲಿ ಮುಂದುವರಿಯುತ್ತಿದ್ದ. ಎರಡನೇ ಮಗ ಮೊದಲನೇ ರ‍್ಯಾಂಕಿನೊಂದಿಗೆ ಕನ್ನಡ ಎಂ.ಎ. ಮುಗಿಸಿ ಕೆಲಸಕ್ಕಾಗಿ ಕಾಯುತ್ತಿದ್ದ. ಮೂರನೇ ಮತ್ತು ಕೊನೆಯವಳೇ ನಮ್ಮ ಮುದ್ದು ಮುನ್ನಿ. ಈಗ ನಮ್ಮೊಂದಿಗೆ ಏಳನೇ ತರಗತಿಯಲ್ಲಿ ಓದ್ತಿದ್ದಾಳೆ.

ಈ ದಿನ ಅವಳು ಹಬ್ಬದ ಖುಷಿಯಲ್ಲಿ ಇರುವುದು ಎಷ್ಟು ಸತ್ಯವೋ ನಮಗೋಸ್ಕರ ಬಿರಿಯಾನಿ, ಮಟನ್ ಕುರ್ಮಾ, ಹಾಲು ಶಾವಿಗೆ ಪಾಯಸ ತರೋದರಲ್ಲಿ ಬಿಜಿ ಇರುತ್ತಾಳೆ ಅನ್ನೋದೂ ಅಷ್ಟೇ ಸತ್ಯ.

ನಮ್ಮ ಕಟ್ಟೆ ನಮಗಾಗಿ ಕಾಯ್ತಾ ಇತ್ತು. ಒಬ್ಬೊಬ್ಬರೇ ಬಂದು ಸೇರ್ತಿದ್ರು. ಅಭಿ ಇತರ ಗೆಳೆಯರೊಂದಿಗೆ ಸೇರಿಕೊಂಡು ಸುತ್ತಮುತ್ತಲಿನ ಹೂವು, ಎಲೆ, ರೆಂಬೆಕೊಂಬೆಗಳಿಂದ ಅಲಂಕಾರ ಮಾಡೋದರಲ್ಲಿ ನಿರತನಾಗಿದ್ದ. ಅಖಿಲ್ ಹೊಸ ಬಟ್ಟೆಯಲ್ಲಿ ಹೊಳೆಯುತ್ತಿದ್ದ. ಬಿಳಿ ಬಣ್ಣದ ಅಂಗಿ ಮತ್ತು ನೀಲಿ ಬಣ್ಣದ ಜೀನ್ಸ್ ಪ್ಯಾಂಟ್ ಧರಿಸಿ ತಂಪು ಕನ್ನಡಕ ಹಾಕ್ಕೊಂಡು ಕೇಕ್ ಪಕ್ಕದಲ್ಲಿ ಇಟ್ಟುಕೊಂಡು ಕುಳಿತಿದ್ದ. ನಾನು ಬಂದವರನ್ನು ಮಾತನಾಡಿಸುತ್ತಾ, ಅದು ಇದು ಕೆಲಸ ಹೇಳುತ್ತಾ, ಅವರನ್ನು ಅಲ್ಲಿ ಇಲ್ಲಿ ಕೂರಿಸ್ತಾ ಸಣ್ಣ ಯಜಮಾನಿ ಥರ ವರ್ತಿಸುತ್ತಿದ್ದೆ.

'ಮುನ್ನಿ ಹಬ್ಬ ಮುಗಿಸಿ ಬರುವುದು ಸ್ವಲ್ಪ ತಡವಾಗಬಹುದು. ಸುಮ್ನೆ ಯಾಕ್ ಕೂರೋದು, ಏನಾದರೂ ಸಣ್ಣ ಆಟ ಆಡಬಹುದಲ್ಲ' ಎಂದು ಅಭಿ ಸಲಹೆ ಕೊಟ್ಟ. ಎಲ್ಲರೂ ರಾಜಾ-ರಾಣಿ ಆಡಲು ಒಪ್ಪಿದರು. ಆದರೆ, ಅಖಿಲ್ ಬರ್ಲಿಲ್ಲ. ಅಭಿ ಬಿಡ್ಲಿಲ್ಲ.

'ಅಖಿಲ್ ಬಾರೋ, ನಿನ್ನ ಬಟ್ಟೆಯೇನೂ ಕೊಳೆಯಾಗಲ್ಲ. ಇದು ಕೂತ್ಕೊಂಡು ಆಡೋ ಆಟ. ಇದೇನ್ ಮರಕೋತಿಯಲ್ಲ' ಎನ್ನುವಾಗಲೇ ಮರದಿಂದ ಮಂಗವೊಂದು ಹಣಕಿ ಹಾಕ್ತು. ಅಭಿ ಅದನ್ನು ನೋಡಿದವನೇ ಕೈಯಲ್ಲಿ ಕಲ್ಲು ಹಿಡಿದು ಎಸೆಯುವವನಂತೆ ಖಾಲಿ ಕೈಬೀಸಿದ. ಮರದಲ್ಲಿನ ಮಂಗ ಹೆದರಿ ಓಡಿಹೋಯಿತು.

ಆಟ ತುಂಬಾ ಮಜವಾಗಿ ಸಾಗ್ತಾ ಇತ್ತು. ಅಖಿಲ್ ಗಮನ ಮಾತ್ರ ಆಟದ ಕಡೆ ಇರದೆ ಕೇಕ್ ಕಡೆಯೇ ಇತ್ತು. 'ಹೇ ಅಖಿಲ್, ಅದನ್ನು ಯಾರು ಕಟ್ ಮಾಡಲಪ್ಪಾ... ಬರ್ತಡೇ ನಿಂದೇ. ಮುನ್ನಿ ಬರೋವರೆಗೂ ಸುಮ್ಮನೆ ಆಡು ಬಾ' ಎಂದ ಅಭಿ.

ಎಲ್ಲರೂ ಆಟದಲ್ಲೂ ಮುಳುಗಿದ್ದರು. ಇದಕ್ಕಿದ್ದಂತೆ ಏನೋ ಶಬ್ದವಾದಂತೆ ಆಯ್ತು. ಎಲ್ಲರೂ ಆ ಕಡೆ ತಿರುಗಿ ನೋಡಿದೆವು. ಅಲ್ಲಿ ಆಗಿದ್ದೇನು? ಎರಡು ಮಂಗಗಳು ಕೇಕ್ ಬಾಕ್ಸ್ ಹಿಡ್ಕೊಂಡು ಓಡ್ತಾ ಇದ್ವು. ಏಕ್‌ಧಂ ಎಲ್ಲರೂ ಎದ್ದು ಅವುಗಳ ಹಿಂದೆ ಓಡಿದೆವು. ಆದರೆ, ಮಂಗಗಳು ಕೇಕ್ ಸಮೇತ ಮರದ ಮೇಲೆ ಏರಿಬಿಟ್ಟವು. ಎರಡೇ ಎರಡು ನಿಮಿಷದಲ್ಲಿ ಎರಡು ಕೆ.ಜಿ. ಕೇಕ್ ಮಂಗಗಳ ಮೂತಿ, ಬಾಲ, ನೆಲದಲ್ಲಿ ಸೇರಿಹೋಯಿತು.

ಅಖಿಲ್ ಮುಖ ಸಪ್ಪಗೆ ಮಾಡಿಕೊಂಡ. ಅಭಿಯನ್ನ ದುರುಗುಟ್ಟಿ ನೋಡಿದ. ಗೊಳೋ ಅಂತ ಅಳುವೇ